**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.3963/2021**

**CW-1 and PW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಯಲ್ಲಪ್ಪ |
| ತಂದೆಃ ಹೆಸರು | ಃ | ಮಾರೆಪ್ಪ |
| ವಯಸ್ಸು | ಃ | 50 |
| ಉದ್ಯೋಗ | ಃ | ಕೂಲಿ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಭಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 12-03-2024**

ಚಾಸಾ-4 ನನ್ನ ತಂಗಿ, ಚಾಸಾ-5 ಮತ್ತು 6 ನನ್ನ ಅಳಿಯಂದಿರು, ಚಾಸಾ-7 ನನ್ನ ಹೆಂಡತಿ, ಚಾಸಾ-8 ನನ್ನ ಸಂಬಂಧಿ. ಆರೋಪಿತರು ಗೊತ್ತು. ಮನೆಯಲ್ಲಿ ನಾನು ನನ್ನ ಹೆಂಡತಿ ಮಕ್ಕಳು ಮತ್ತು ತಂಗಿ ವಾಸವಿರುತ್ತೇವೆ. ಆರೋಪಿತರು ನಮ್ಮ ಮನೆ ಪಕ್ಕ ವಾಸವಿರುತ್ತಾರೆ. ಸುಮಾರು 3 ವರ್ಷಗಳ ಹಿಂದೆ ಮಧ್ಯಾಹ್ನ 12 ಗಂಟೆಗೆ ನಾನು ನಮ್ಮ ಮನೆ ಹತ್ತಿರ ಇದ್ದಾಗ ಆರೋಪಿತರು ಅಲ್ಲಿಗೆ ಬಂದು ಜಾಗ ಬಿಟ್ಟು ಕೊಡು ಅಂತ ನನಗೆ ಅಂದರು. ನಾನು ಜಾಗ ಬಿಡುವುದಿಲ್ಲ ಅಂತ ಹೇಳಿದೆ. ನಂತರ ಅವರು ಕೈಗಳಿಂದ ನನ್ನ ಮೈಕೈಗೆ ಹೊಡೆದರು, ಕಟ್ಟಿಗೆಯಿಂದ ನನ್ನ ತಲೆ ಹಿಂಬದಿಗೆ ಹೊಡೆದಾಗ ನಾನು ಕೆಳಗೆ ಬಿದ್ದೆ. ಆಗ ನನ್ನ ತಂಗಿ ಮತ್ತು ನನ್ನ ಹೆಂಡತಿ ನನ್ನನ್ನು ಹಿಡಿದುಕೊಂಡು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಆರೋಪಿತರು ನನಗೆ ಹೊಡೆದಿದ್ದರಿಂದ ಗಾಯ ನೋವುಗಳು ಆಗಿದ್ದವು. ಈ ಬಗ್ಗೆ ದೂರನ್ನು ನಾನೇ ಕೊಟ್ಟಿರುತ್ತೇನೆ. ಸಾಕ್ಷಿ ದೂರಿನ ಮೇಲೆ ತನ್ನ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ಸಾಕ್ಷಿಯು ಭಾವಚಿತ್ರದಲ್ಲಿ ಇದ್ದ ತನ್ನ ಹೆಂಡತಿ ಮತ್ತು ತಂಗಿಯನ್ನು ನೋಡಿ ಗುರುತಿಸಿರುತ್ತಾರೆ. ಕಟ್ಟಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ-1 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರು ಹಾಜರು ಇದ್ದು ಗುರುತಿನ ಬಗ್ಗೆ ವಕೀಲರು ತಕರಾರು ಇಲ್ಲವೆಂದು ಹೇಳಿರುತ್ತಾರೆ. ಸದರಿ ಜಗಳ ನಮ್ಮ ಮತ್ತು ಆರೋಪಿತರ ನಡುವೆ ಜಾಗದ ಸಲುವಾಗಿ ಆಗಿರುತ್ತದೆ. ರಿಮ್ಸ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದಿರುತ್ತೇನೆ.

## <u>ಪಾಟೀ ಸವಾಲುಃ</u> <u>ಆರೋಪಿ ಪರ ಎಸ್.ಹೆಚ್. ವಕೀಲರಿಂದ</u>

ದೂರನ್ನು ನಾನು ಜಗಳವಾದ 2 ದಿನಗಳ ನಂತರ ಕೊಟ್ಟಿರುತ್ತೇನೆ. ಘಟನೆಯಾದ ನಂತರ ನಾನು 2 ದಿನ ಮನೆಯಲ್ಲಿ ಇದ್ದೆ 3 ನೇ ದಿನ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತೇನೆ. ದೂರನ್ನು ಪೋಲಿಸರು ಆಸ್ಪತ್ರೆಯಲ್ಲಿ ಬರೆದರು.

ಕಮಲಪೂರು ಅಡಿವೆಮ್ಮ ನನ್ನ ಅಜ್ಜಿ. 1973 ರಲ್ಲಿ ಮ.ನಂ.8-1-4 ಇದನ್ನು ನನ್ನ ಅಜ್ಜಿ ಶೇಶಯ್ಯ ಇವರಿಗೆ ನೊಂದಣಿ ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿದ್ದಳು ಎಂದರೆ ಸರಿಯಲ್ಲ. ಶೇಶಯ್ಯ ಇವರಿಂದ ಜಾಗವನ್ನು 3 ನೇ ಆರೋಪಿ ಜಯಪ್ಪ ಖರೀದಿ ಮಾಡಿದ್ದ ಎಂದರೆ ಸರಿಯಲ್ಲ. ಅ ರೀತಿ ಖರೀದಿ ಮಾಡಿದ ಜಾಗವನ್ನು ಆರೋಪಿತರು ಬಿಟ್ಟು ಕೊಡು ಕೇಳಿದಾಗ ನಾವು ಜಾಗೆ ಬಿಟ್ಟು ಕೊಟ್ಟಿಲ್ಲ ಎಂದರೆ ಸರಿಯಲ್ಲ. 3 ವರ್ಷಗಳ ಹಿಂದೆ ಮಧ್ಯಾಹ್ನ 12 ಗಂಟೆಗೆ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದರು ನನಗೆ ಗಾಯಗಳು ಆಗಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆದಿಲ್ಲ ಮತ್ತು ನನಗೆ ಯಾವುದೇ ಗಾಯಗಳು ಆಗದ ಕಾರಣ ನಾನು ಅದೇ ದಿನ ಠಾಣೆಗೆ ಹೋಗಿ ದೂರು ನೀಡಿಲ್ಲ ಮತ್ತು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ದಿನಾಂಕ 24.03.2021 ರಂದು ನಾನು ಕುಡಿದ ಅಮಲಿನಲ್ಲಿ ರಾತ್ರಿ ಸಮಯದಲ್ಲಿ ರಸ್ತೆಯಲ್ಲಿ ಬರುತ್ತಿದ್ದಾಗ ಯಾವುದೋ ಒಂದು ದ್ವಿಚಕ್ರ ವಾಹನ ನನಗೆ ಟಕ್ಕರ್ ಕೊಟ್ಟಿದ್ದರಿಂದ ನಾನು ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ದ್ವೇಷ ಇಟ್ಟುಕೊಟ್ಟಿದ್ದರಿಂದ ಅವರೇ ಹೊಡೆದಿದ್ದಾರೆ ಎಂದು ಸುಳ್ಳು ಕೇಸು ಮಾಡಿದ್ದೇನೆ ಎಂದರೆ ಸರಿಯಲ್ಲ. 3 ವರ್ಷಗಳ ಹಿಂದೆ ಆರೋಪಿತರು ನಮ್ಮ ಮನೆ ಹತ್ತಿರ ಬಂದು ಜಾಗೆ ಬಿಡಲು ಹೇಳಿದರು ನಾನು ಬಿಡುವುದಿಲ್ಲ ಅಂತ ಅಂದಾಗ ಅವರು ಕೈಗಳಿಂದ ಮತ್ತು ಕಟ್ಟಿಗೆಯಿಂದ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನನ್ನ ತಂಗಿ ಮತ್ತು ಹೆಂಡತಿ ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಗೆ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ-1 ಇದು ಸಾಮ್ಯಾವಾಗಿ ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತುಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**